Regd No B G. 155

Sri

28—10—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ವಿ ಸುಬ್ಬರಾಯರು [2 ನಪ್ಪೆ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನೆ ಪೈ

Protect the Cow
ಗೋಸಂರಕ್ಷಣೆ ಮಾಡಿ

ಪರೀಕ್ಷಾ ಫಲಿತಾಂಶ

ಮೈಸೂರು— ಸೆಪ್ಟಂಬರಿನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಎಂ ಬಿ ಬಿ ಎಸ್ ಎರಡನೆ ಮತ್ತು ಕಡೇಡಿಗ್ರಿ ಪರೀಕ್ಷೆಗಳ ಫಲಿತಾಂಶವು 30 ನೇ ತಾರೀಖು ಮಧ್ಯಾಹ್ನ 2 ಗಂಟೆಗೆ ಪ್ರಕಟಿಸಲ್ಪಡುವುದು

★

ಮಕ್ಕಳ ಅಪಹರಣ

ಮಂಗಳೂರಿನಲ್ಲಿ ಮಕ್ಕಳನ್ನು ಎತ್ತಿಕೊಂಡುಹೋಗುವವರನ್ನು ಹಿಡಿಯಲಾಗುತ್ತಿದೆ.

★

ಮರಣ

ಸೈಗಾನಿನಿಂದ ಬಂದ ವಾರ್ತೆ ಪ್ರಕಾರ ವಿಯಟ್ ಕಾಂಗ್ ಗೆರಿಲ್ಲಾಗಳು ಬೆಂಕಿ ಕೊಡೆದಿಂಳಿಸಿದ ಅವೇರಿಕಾ ವಿಮಾನ ಪಡೆ ಸೇರಿಸಿದ ವಿಮಾನದಲ್ಲಿ ಇದ್ದ 8 ಮಂದಿ ಸತ್ತಿದ್ದರೆಂದು ಅವೇರಿಕ ಮಿಲಿಟರಿ ವಕ್ತಾರರೊಬ್ಬರು ಹೇಳಿದರು

—

ಭಾರತದಿಂದ ಅವೇರಿಕಾಕ್ಕೆ ಮೇಕೆ ಕೂದಲನ್ನು ರಫ್ತು ಮಾಡುವ ಬಗ್ಗೆ ಭಾರತ ಸರ್ಕಾರ ಮತ್ತು ಅವೇರಿಕಾದ ಸಂಯುಕ್ತ ಸಂಸ್ಥಾನಗಳ ಖಜಾನೆ ಶಾಖೆ ವಿದೇಶೀ ಆಸ್ತಿಗಳ ನಿಯಂತ್ರಣ ವಿಭಾಗಗಳ ನಡುವೆ ಒಂದು ಒಪ್ಪಂದವು ಏರ್ಪಟ್ಟಿದೆ.

ಪ್ರಧಾನಿ ಶಾಸ್ತ್ರಿಗಳು ರಾಜ್ಯಗಳ ಮುಖ್ಯ ಮಂತ್ರಿಗಳೊಡನೆ ಒಂದು ಗಂಟೆ ಮಾತುಕತೆ ನಡೆಸಿದರೆಂದು ನವ ದೆಹಲಿ ವಾರ್ತೆ

ನಾಳೆಯ ಪಂಚಾಂಗ

ದೈವಜ್ಞಶಿಖಾಮಣಿ
ಅಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ
ರಾಜಜ್ಯೋತಿಷ್ಯಸಕ್ರ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ

29 ಗುರುವಾರ ನವಮಿ ಅಶೇಷ

ಅಣು ಅಂಶ ಪತ್ತೆ

ಅಕ್ಟೋಬರ್ 22ರಂದು ಬೆಳಿಗ್ಗೆ ನ್ಯೂಯಾರ್ಕಿನಿಂದ ಬೊಂಬಾಯಿಗೆ ಆಗಮಿಸಿದ ಒಂದು ಭಾರತೀಯ ವಿಮಾನದ ಮೇಲಿದ್ದ ಧೂಳನ್ನು ಸಂಗ್ರಹಿಸಿ ಅದನ್ನು ವೈಜ್ಞಾನಿಕವಾಗಿ ಪರೀಕ್ಷಿಸಿದಾಗ ಅಣುಬಾಂಬು ಆಸ್ಫೋಟನೆಯ ಭಸ್ಮದ ಅಂಶಗಳು ಅದರಲ್ಲಿದ್ದವು ಕಂಡುಬಂತು.

★

ಸಪ್ತಾಹ

ದೇಶಾದ್ಯಂತ ಇದೀಗ ಆಚರಿಸಲಾಗುತ್ತಿರುವ ಹಸಿವಿನಿಂದ ವಿಮೋಚನೆ ಸಪ್ತಾಹದ ಅಂಗವಾಗಿ ವಸ್ತುಪ್ರದರ್ಶನಗಳು, ವಿಚಾರಂಗೋಷ್ಠಿ, ವಿಶೇಷ ಕಾರ್ಯಯೋಜನೆಗಳ ಉದ್ಘಾಟನೆ ಪ್ರಚಾರ ಕಾರ್ಯಕ್ರಮಗಳು ಇವೇ ಮೊದಲಾದ ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಸಪ್ತಾಹವು ಈ 25 ರಿಂದ ಆರಂಭವಾಗಿದೆ.

★

ವಿಮಾನ ಸಂಚಾರ

ಅವೇರಿಕಾದೊಡನೆ ಆದ ಒಪ್ಪಂದದ ಪ್ರಕಾರ ದಿನವೂ ನೂ ಯಾರ್ಕ್ ವಿಮಾನ ಸರ್ವಿಸು ಏರ್ಪಡಿಸಲಾಗುವುದು

★

ಬಿಜಾಪುರದಲ್ಲಿ ಈಚೆಗೆ ಆದ ಭೀಕರ ಮಳೆಯು ಹಾವಳಿ ಕುರಿತ ವಿಂದಿಯನ್ನು ಶಿಕ್ಷಣ ಮಂತ್ರಿ ಶ್ರೀ ಕಂಠಿಯವರು ಮುಖ್ಯ ಮಂತ್ರಿ ಶ್ರೀ ನಿ ಲಿಂಗಪ್ಪನವರಿಗೆ ವಂದಿ ನೀಡುವರು ಕಂಠಿಯವರ ಹಿಡಕಲಿನಲ್ಲಿರುವ ಪಿತ್ರಾರ್ಜಿತ ಮನೆ ಅರ್ಧ ಕುಸಿಯಿತು.

★

ಅಧ್ಯಕ್ಷರ ಸ್ವಂತ ಅತಿಥಿಯಾಗಿ ಆಗಮಿಸಿರುವ ಶ್ರೀಮತಿ ಇಂದಿರಾಗಾಂಧಿಯವರನ್ನು ಅಧ್ಯಕ್ಷ ಟೀಟೋ ಸುಸ್ವಾಗತಿಸಿ ಅದಂಪೂರ್ವಕ ಮಾತುಕತೆ ನಡೆಸಿದರೆಂದು ಬೆಲ್ಗ್ರೇಡಿನ ವಾರ್ತೆ

ನದಿ ನೀರು ಹಂಚಿಕೆ ಬಗ್ಗೆ ದೆಹಲಿಯಲ್ಲಿ ಚರ್ಚೆ

ಕೃಷ್ಣಾ—ಗೋದಾವರಿ ನೀರಿನ ಹಂಚಿಕೆ ಕುರಿತು ಆಂಧ್ರ, ಮೈಸೂರು, ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಜರ್ಜಿಸುವರು ನವ ದೆಹಲಿಯಲ್ಲಿ ನಡೆಯುವ ಈ ಚರ್ಚೆಯಲ್ಲಿ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿ ಡಾ|| ಕೆ ಎಲ್ ರಾವ್ ರವರು ಅಧ್ಯಕ್ಷತೆ ವಹಿಸುವರು.

★

ನಾಲ್ಕನೆ ಯೋಜನೆ

ನವ ದೆಹಲಿಯಲ್ಲಿ ಸಮಾವೇಶವಾಗಿದ್ದ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಯೋಜನಾಸಮಿತಿ ಉಪಾಧ್ಯಕ್ಷ ಶ್ರೀ ಅಶೋಕ ಮೆಹತಾರು ಮಾತನಾಡುತ್ತಾ, ನಾಲ್ಕನೆ ಯೋಜನೆ 3 ನೆಯ ಯೋಜನೆಯ ಎರಡರಷ್ಟು ಇದೆ ಎಂದು ನುಡಿದರು.

★

ವ್ಯವಸಾಯೋತ್ಪನ್ನ ಮೊದಲು

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯನ್ನುದ್ದೇಶಿಸಿ ಪ್ರಧಾನಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿ ಯವರು ಮಾತನಾಡುತ್ತಾ, ವ್ಯವಸಾಯ ಉತ್ಪಾದನೆ ಕಡೆಗೆ ಗಮನಕೊಡಬೇಕಾದುದು ಮೊದಲು ಹಾಗೂ ಮುಖ್ಯವಾದುದು ಎಂದರು. ಹೊರಗಿನಿಂದ ಆಹಾರ ಧಾನ್ಯ ತರಿಸುವುದರ ವಿರುದ್ಧ ದೃಢಸಂಕಲ್ಪ ಮಾಡಬೇಕೆಂದು ನುಡಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಎಷ್ಟೇ ಕಷ್ಟವಾದರೂ ಸಾಮಾನ್ಯ ಜನರ ಪ್ರಗತಿಯನ್ನು ನಾಲ್ಕನೆಯ ಯೋಜನೆಯಲ್ಲಿ ಮಾಡಬೇಕೆಂದೂ ತಿಳಿಸಿದರು.

ಆಡ್ಡಿಯಿಲ್ಲ

ವಲಸೆ ಸರ್ಟಿಫಿಕೇಟು ಹೊಂದದ ಪಾಕಿಸ್ತಾನದಿಂದ ಬರುವ ವಲಸೆಗಾರರನ್ನು ದೇಶಕ್ಕೆ ಪ್ರವೇಶಿಸಲು ಆಡ್ಡಿ ಮಾಡದ ನಿರ್ಧಾರವನ್ನು ಭಾರತ ಸರ್ಕಾರ ಕೈಗೊಂಡಿರುವುದಾಗಿ ನವ ದೆಹಲಿ ವಾರ್ತೆ

★

ಕ್ಯಾನ್ಸರ್

ಈ ವರ್ಷ ನ್ಯೂಯಾರ್ಕಿನಲ್ಲಿ ಕ್ಯಾನ್ಸರ್ ಖಾಯಿಲೆಯಿಂದ 2 ಲಕ್ಷದ 90 ಸಹಸ್ರ ಮಂದಿ ಮರಣಹೊಂದಿದರು ಅದರಿಂದ ಗುಣಹೊಂದಿದ ಹದಿಮೂರು ಸಹಸ್ರ ಅಮೆರಿಕನರು ಇನ್ನೂ ಜೀವಿಸಿರುವರು.

★

ಪ್ರಯಾಣ ಮುಂದಕ್ಕೆ

ಸಿಂಹಳ ಭಾರತೀಯರ ಬಗ್ಗೆ ಭಾರತ ಪ್ರಧಾನಿಗಳೊಂದಿಗೆ ಮಾತುಕತೆ ನಡೆಸುತ್ತಿರುವ ಸಿಂಹಳ ಪ್ರಧಾನಿ ಶ್ರೀಮತಿ ಬಂಡಾರಾನಾಯಕೆಯವರು ತಮ್ಮ ಪ್ರಯಾಣವನ್ನು ಒಂದು ದಿನ ಮುಂದುವರಿಸಿದರು

—

ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿ ತನ್ನ ಸದಸ್ಯರಿಗೆ ಇತ್ತೀಚಿನ ಸರ್ಕಾರಿಲಿನಲ್ಲಿ, ದೇಶದ ಉತ್ಕಟ ಪರಿಸ್ಥಿತಿ ಸೂಚನೆ, ಬೇಸಾಯ ಉತ್ಪನ್ನ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಚಳವಳಿಯಲ್ಲಿ ಸಹಕರಿಸಬೇಗುದು ತಿಳಿಸಿರುವರು

ಅಂತರಾಷ್ಟ್ರೀಯ ಅಭಿವೃದ್ಧಿ ಸಂಘವು ಭಾರತದ ರೈಲ್ವೆ ಅಭಿವೃದ್ಧಿಗೆ 62 ಏ ಲಿ ಯ ಡಾಲರು ಸಾಲವಿತ್ತಿದೆ

ಶ್ರೀ ಧನ್ವಂತರಿ ಜಯಂತಿ

(ಮುಂದುವರಿದುದು)

ಈ ರೀತಿ ಅತ್ಯಮೋಘವಾದ ಆಯುರ್ವೇದ ಶಾಸ್ತ್ರದ ಪರಿಸ್ಥಿತಿ ಇಂದು ಭರತಖಂಡದಲ್ಲಿ ಯಾವ ರೀತಿ ಇದೆ ; ಕಾಯಚಿಕಿತ್ಸಾಭಾಗವಿನಃ ಮಿಕ್ಕ ಭಾಗಗಳೆಲ್ಲಾ ಅಚಂಣೆಗೆ ಶರಂದೇ ಲುಪ್ತವಾಗಿದೆ : ಆಯುರ್ವೇದದಲ್ಲಿ ಚಿಕಿತ್ಸೆಯನ್ನು ಪಡೆಯುವುದು ಅವಮಾನವೆಂದು ವಿದ್ಯಾವಂತರೆಂದು ತಿಳಿದಿರುವವರ ಭಾವನೆಯಾಗಿದೆ : ಹಿಂದಿನ ಪ್ರಧಾನಿಗಳು ಆಯುರ್ವೇದ ವೈದ್ಯರಿಗೆ ದೋಗಲಕ್ಷಣವನ್ನು ತಿಳಿಸಿ ಅವಂದ ಔಷಧಿ ಪಡೆದುವುದೆಂದರೆ ವಿದೇಶಗಳಲ್ಲಿ ನಗೆಗೀಡಾಗಬೇಕಾಗುತ್ತದೆಂದು ಭಾವಿಸಿದ್ದ ವಿಚಾರ ಪತ್ರಿಕೆಗಳಲ್ಲಿ ಬಂದಿತ್ತು ; ಕೆಲವು ವೈದ್ಯರು ಆಯುರ್ವೇದವನ್ನು ಪುನಃಜ್ಜೀವನಗೊಳಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ ; ಆ ದರೆ ವೈದ್ಯಂಲ್ಲಿಯೇ ಶುದ್ಧಾಯುರ್ವೇದವೇ ವಿಶಾಖ್ಯಾಯುರ್ವೇದವೇ ಎಂಬ ಬಗ್ಗೆ ಭಿನ್ನಾಭಿಪ್ರಾಯವಿದ್ದು ಆಯುರ್ವೇದದ ಅವನತಿಗೆ ಕಾರಂಣವಾಗಿದೆ : ಸರ್ಕಾರವಾದರೋ ಪೂರ್ವ ವಂಸ್ಕಾರಿಂದ ಪ್ರೋತ್ಸಾಹವೀಯುತ್ತಿಲ್ಲ ; ಜನಗಳಲ್ಲಿ ಆಯುರ್ವೇದವೆಂದರೆ ಅದೊಂದು ಮೂಢನಂಬಿಕೆಯ ಪದ್ಧತಿ ಎಂಬ ಭಾವನೆ ಜೀರೂರಿದೆ : ಅನೇಕರು ಅದು ಹಳೆಯ ಕಾಲದ ವೈದ್ಯ, ಈ ಕಾಲಕ್ಕೆ ಅದರಿಂದ ಪ್ರಯೋಜನವಿಲ್ಲ ಎಂಬಭಾವಿ ಹೇಳಿ, ಅಲೋಪತಿ ವೈದ್ಯಕ್ಕೆ ಶರಣುಹೋಗುತ್ತಿದ್ದಾರೆ : ಇನ್ನು ಕೆಲವರು ಆಂಗ್ಲಾ ವೇಷಭೂಷಣಕ್ಕೆ ಹಾಗೂ ಆಂಗ್ಲಾ ಭಾಷೆಗೆ ಕಾರಂಣವಿಲ್ಲದೇ ಗುಲಾಮರಾಗಿರುವಂತೆ ಆಂಗ್ಲಾ ವೈದ್ಯಪದ್ಧತಿಯನ್ನು ಫ್ಯಾಶನಬಲ್ ಆಗಿ ತಿಳಿದಿದ್ದಾರೆ

ಈ ರೀತಿ ಆಗಲು ಕಾರಂಣವೇನು ? ಆಯುರ್ವೇದ ಈಗಿನ ಕಾಲಕ್ಕೆ ಹೊಂದುವುದಿಲ್ಲವೇ ? ನಾನು ನಮ್ಮ ಮನೆಯಲ್ಲಿರುವ ಆಯುರ್ವೇದ-ಗ್ರಂಥಗಳನ್ನು ಸ್ವಲ್ಪಸ್ವಲ್ಪವಾಗಿ ಅಭ್ಯಾಸಮಾಡುತ್ತಿದ್ದೇನೆ ; ಈಗ್ಗೆ ಅಂವಶ್ಯ ವರ್ಷಗಳಿಂದ ನಮ್ಮ ಮನೆತನದಲ್ಲಿ ಸ್ವಂತವಾಗಿ ಔಷಧಿ ತಯಾರಿಸುವುದು ನಿಂತುಹೋದದ್ದರಿಂದ ಅನುಭವ ನನಗೆ ಬಂಲಿಲ್ಲವಾದಕಾರಂಣ ಈಗ್ಗೆ ಆರು ವರ್ಷಗಳಿಂದ ನಂಜನಗೂಡು ಸದ್ವೈದ್ಯಶಾಲೆಯು ಔಷಧಿಗಳನ್ನು ತಂದಿಟ್ಟುಕೊಂಡು ಸಾಮಾನ್ಯ ವ್ಯಾಧಿಗಳಿಗೆ ಚಿಕಿತ್ಸೆ ನೀಡುತ್ತಿದ್ದೇನೆ : ನನಗೆ ಸ್ಪಷ್ಟವಾಗಿ ವ್ಯಾಧಿಯು ಸ್ವರೂಪ ತಿಳಿದಲ್ಲಿ ಮಾತ್ರ ಔಷಧಿಕೊಡತ್ತೇನೆ ; ತಿಳಿಯದೇ ಇದ್ದಲ್ಲಿ ಅಥವಾ ನನ್ನಲ್ಲಿ ಇಲ್ಲದೇಯಿರುವ ಔಷಧ ಕೊಡಬೇಕಾಗಿದ್ದಲ್ಲಿ ಹತ್ತಿರದ ಸರ್ಕಾರೀ ಆಸ್ಪತ್ರೆಗಾಗಲೀ ಅಥವಾ ನಂಜನಗೂಡು ಶ್ರೀ ಬಿ ವಿ ಪಂಡಿತಂಲ್ಲಿಯಾಗಲೀ ಹೋಗುವಂತೆ ತಿಳಿಸುತ್ತಿದ್ದೇನೆ : ಇದರಿಂದ ನಾನು ಹೇಳಿದ ಪಥ್ಯದಲ್ಲಿದ್ದ ಪ್ರತಿಯೊಬ್ಬರೋಗಿಯೂ ಗುಣಹೊಂದಿದ್ದಾನೆ ; ಆಯುರ್ವೇದ ಔಷಧಗಳು ಈಗಿನ ಕಾಲಕ್ಕೆ ಹೊಂದದೇಯಿದ್ದಲ್ಲಿ ಇದು ಹೇಗೆ ಸಾಧ್ಯವಾಗುತ್ತಿತ್ತು ? ನನ್ನ ಅಭಿಪ್ರಾಯದಲ್ಲಿ ಆಯುರ್ವೇದ ವೈದ್ಯರುಗಳ ಭಿನ್ನಾಭಿಪ್ರಾಯ ಹಾಗೂ ಸರ್ಕಾರದ ಧೋರಣೆಗಳೇ ಆಯುರ್ವೇದದ ಅವನತಿಗೆ ಕಾರಂಣವಾಗಿದೆ. [ಮುಂದುವರಿಯುವುದು]

ಅನಂತನಂಸಿಂಹಯ್ಯಂಗಾರ್
ಶಾಸ್ತ್ರಧರ್ಮಪ್ರಚಾರ ಸಭಾ (ಶಾಪೆ)
ಹೊಂಗನೂರು, ಮೈಸೂರು ಜಿಲ್ಲೆ

ದಸರಾ ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮ- ಎಗ್ಮಿಬಿಷನ್ನಿನಲ್ಲಿ

ತಾ|| 28 ರಂದು ಸಂಜೆ 6 ರಿಂದ ನಾಗಸ್ವರ, ನಾಟ್ಯ

= Read the Radical Review =

' THE RADIANT ★ ಕ್ರಾಂತಿ "

will be Released on 14th November 1964

The only monthly Anglo-Kannada Review

You will have everything for pleasure

The Radiant Publications MYSORE

ವುಡ್‌ಲಾಂಡ್ಸ್ 23-10-64 ರಿಂದ

ಶಿ ಸು ಅಮೋಘ ಆರಂಭ

ವಹಿಡಾ ರಹಿನ್ಹಾ, ವಿಜಯಕುಮಾರ್, ಜಾನಿವಾಕರ್, ನಿರೂಪರಾಯ್

ಅಭಿನಯಿಸಿರುವ ಸುಂದರ ಹಿಂದೀ ಚಿತ್ರ

ಕೌನ್ ಆಪ್ ಕೌನ್ ಪರಾಯ

ಸಂಗೀತ- ರವಿ [ದಿನವಹಿ 3 ಪ್ರದರ್ಶನಗಳು]

ಆಪೆರಾ ಜನಪ್ರಿಯ 3 ನೇ ವಾ

ಸುಂದರ ತೆಲುಗು ಚಿತ್ರ [ದಿನ 3 ಆಟಗಳು]

ವೀರಾಂಗನೆ

ಪಾತ್ರ- ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ ಬಾಲಾಜಿ, ಸುಕುಮಾರಿ, ಅಶೋಕ

ರಣಜಿತ್‌ನಲ್ಲಿ ಯಶಸ್ವಿ 4 ನೇ ವಾ

- ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ -

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು

ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI

SUDHA

Superb Tonic

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press, Chamarajapuram, Mysore